

# ಗಾಂಧಿ-150 ವಿಶೇಷ

**ರಘುನಾಥ ಚ.ಹ.**

ಚಲನಚಿತ್ರ ಮಾಧ್ಯಮಕ್ಕೂ ಮಹಾತ್ಮಗಾಂಧಿಗೂ ಇನ್ನಿಲ್ಲದ ನಂಟು. ಸಿನಿಮಾ ಮಾಧ್ಯಮ ಗಾಂಧೀಜಿಯ ಪಾಲಿಗೆ ಪ್ರಿಯವಾದುದೇನಾಗಿರಲಿಲ್ಲ. ಅದನ್ನೊಂದು 'ಕೇಡು' ಎನ್ನುವ ನಂಬಿಕೆಯಲ್ಲಿ ಚಲನಚಿತ್ರ ಮಾಧ್ಯಮವನ್ನು ಅವರು ಉಪೇಕ್ಷಿಸಿದರೂ, ಸಿನಿಮಾಕ್ಕೆ ಮಾತ್ರ ಗಾಂಧಿಯವರ ಮಹತ್ವವನ್ನು ನಿರ್ಲಕ್ಷಿಸುವುದು ಸಾಧ್ಯವಾಗಲಿಲ್ಲ. ಇಡೀ ದೇಶದ ಭಾವಕೋಶವನ್ನು ಆವರಿಸಿಕೊಂಡ ಮಹಾತ್ಮನಿಂದ ಯಾವ ಮಾಧ್ಯಮ ತಾನೆ ಅಂತರ ಕಾಪಾಡಿಕೊಳ್ಳಲು ಸಾಧ್ಯ?

ಕಥೆಗಳ ಮಾತಿರಲಿ, ಚಲನಚಿತ್ರ ಪ್ರದರ್ಶನದ ವ್ಯವಸ್ಥೆಯಲ್ಲಿಯೇ ಮಹಾತ್ಮನ ಛಾಯೆಯಿತ್ತು. ತೆರೆಗೆ ಹತ್ತಿರವಾಗಿದ್ದ ಸೀಟುಗಳನ್ನು 'ಗಾಂಧಿ ಕ್ಲಾಸ್' ಎಂದು ಕರೆಯುತ್ತಿದ್ದ ಕಾಲವಿತ್ತು. ಪ್ರೊಜೆಕ್ಟರ್ ಹಾಗೂ ತೆರೆಯನ್ನೊಳಗೊಂಡ ಟೆಂಟ್‌ಗಳೆಂಬ ಡೇರೆಗಳಲ್ಲಿ ಸಿನಿಮಾ ಪ್ರದರ್ಶನಗಳು ನಡೆಯುತ್ತಿದ್ದ ದಿನಗಳವು. ಆಗ ತೆರೆಗೆ ಸಮೀಪದ ಭಾಗದಲ್ಲಿ ಜನ ನೆಲದ ಮೇಲೆ ಕುಳಿತೇ ಸಿನಿಮಾ ನೋಡುತ್ತಿದ್ದರು. ಪ್ರೊಜೆಕ್ಟರ್ ಕೊಠಡಿಗೆ ಮುಂದುಗಡೆ ಒಂದಷ್ಟು ಕುರ್ಚಿಗಳೋ ಬೆಂಚುಗಳು ಇರುತ್ತಿದ್ದವು. 'ಗಾಂಧಿ ಕ್ಲಾಸ್' ಕಡಿಮೆ ಟಿಕೆಟ್ಟಿನ ಜನಸಾಮಾನ್ಯರಿಗೆ ಸೀಮಿತವಾಗಿದ್ದ ಜಾಗ. ಗೋಣಿಚೀಲವನ್ನೋ ಚಾಪೆಯನ್ನೋ ಕೆಲವರು ಹಾಸಿಕೊಂಡು ಕುಳಿತರೆ, ಮತ್ತೆ ಕೆಲವರು ಮಣ್ಣುನೆಲದ ಮೇಲೆ ಕುಳಿತೇ ಸಿನಿಮಾ ನೋಡುತ್ತಿದ್ದರು. ಮಣ್ಣು ಸರಳತೆಗೂ ಸರಳತೆಗೆ ಗಾಂಧಿಯೂ ಪರ್ಯಾಯವಷ್ಟೇ. ಆ ಕಾರಣದಿಂದಲೇ ತೆರೆಗೆ ಸಮೀಪದ ಜಾಗ 'ಗಾಂಧಿ ತರಗತಿ' ಎಂದು ಹೆಸರಾಯಿತು. ಚಿತ್ರಮಂದಿರಗಳು ರೂಪುಗೊಂಡಾಗಲೂ ಮುಂದಿನ ಸಾಲಿನ ಕುರ್ಚಿಗಳು 'ಗಾಂಧಿ ಕ್ಲಾಸ್' ಎಂದು ಕರೆಸಿಕೊಂಡವು. ಆದರೆ, ಚಿತ್ರಮಂದಿರಗಳು ಆಧುನೀಕರಣಗೊಂಡಂತೆಲ್ಲ ಹಾಗೂ ಬಹುಪರದೆಯ ಮಲ್ಟಿಪ್ಲೆಕ್ಸ್‌ಗಳು ತಲೆಯೆತ್ತುತ್ತಿದ್ದಂತೆ 'ಗಾಂಧಿ ಕ್ಲಾಸ್' ಕಾಣೆಯಾಗ ತೊಡಗಿತು. ಸಿನಿಮಾ ಎನ್ನುವ ತಕ್ಕಡಿಯಲ್ಲಿ ಕಲೆಯ ತಟ್ಟೆ ಮೇಲಕ್ಕೆ ಬರುತ್ತಾ ವ್ಯಾಪಾರದ ಬಟ್ಟಲಿನ ತೂಕ ಹೆಚ್ಚಾದುದು ಹಾಗೂ ಸಿನಿಮಾಗಳಲ್ಲಿ ಸರಳತೆ ಸೊರಗುತ್ತಾ ಅದ್ದೂರಿತನ ಹೆಚ್ಚಾದುದಕ್ಕೆ ಪ್ರತಿಕ್ರಿಯೆಯ ರೂಪದಲ್ಲೂ ಗಾಂಧಿ ಕ್ಲಾಸ್ ಕಣ್ಮರೆಯನ್ನು ನೋಡಬಹುದು.

ಕನ್ನಡ ಚಿತ್ರರಂಗ ಕೂಡ ಗಾಂಧಿಯೊಂದಿಗೆ ನಿರಂತರವಾಗಿ ಅನುಸಂಧಾನ ನಡೆಸುತ್ತಲೇ ಬಂದಿದೆ. ಕನ್ನಡ ಚಿತ್ರೋದ್ಯಮದ ಚಟುವಟಿಕೆಗಳ ಕೇಂದ್ರಭಾಗಕ್ಕೆ 'ಗಾಂಧಿನಗರ' ಎಂದೇ ಹೆಸರು. ಈ ಹೆಸರಿನ ಆಚೆಗೂ ಗಾಂಧಿ ಕಥನಗಳ ಕೆಲವು ಗಮನಾರ್ಹ ಚಿತ್ರಗಳನ್ನು ಕನ್ನಡ ಚಿತ್ರರಂಗ ರೂಪಿಸಿದೆ. ಅಂಥದೊಂದು ಮುಖ್ಯವಾದ ಸಿನಿಮಾ 'ಮಾಡಿ ಮಡಿದವರು'.

ಮನುಷ್ಯನ ಉದಾತ್ತತೆಯ ನಮ್ಮ ಬಣ್ಣನೆಗಳು ಕೊನೆಗೊಳ್ಳುವುದು ವ್ಯಕ್ತಿಯನ್ನು ದೈವದ ಪಟ್ಟಕ್ಕೇರಿಸುವಲ್ಲಿ. ಆದರೆ, 'ಮಾಡಿ ಮಡಿದವರು' ಚಿತ್ರದ ಒಂದು ಹಾಡಿನಲ್ಲಿ ಗಾಂಧಿ ಮಹಾತ್ಮನನ್ನು 'ನಿದ್ದಿ ಮಾಡೊ ದೇವರಂಥ ಗಾಂಧಿ' ಎಂದು ಕೊಂಡಾಡಲಾಗುತ್ತದೆ. 'ನಿದ್ದೆ ಮಾಡುವ ದೇವರು' ಎನ್ನುವ ವಿಶೇಷಣವೇ ಬಹು ಸೊಗಸಾದುದು ಹಾಗೂ ಮಾರ್ಮಿಕವಾದುದು. ದೇವರು ನಿದ್ದೆ ಹೋದರೆ ಲೋಕದ ಗತಿಯೇನು? ಆದರೆ, ವರ್ತಮಾನದ